ನಿಮ್ಮೊಡನೆ

# ಮಕ್ಕಳೇಕೆ ಕಣ್ಮರೆಯಾಗುತ್ತಾರೆ?

ಭಾರತದಲ್ಲಿ ಸರಾಸರಿ ಪ್ರತಿ 8 ನಿಮಿಷಕ್ಕೆ ಒಬ್ಬ ಬಾಲಕ/ ಬಾಲಕಿ ಕಣ್ಮರೆಯಾಗುತ್ತಿದ್ದಾನೆ ಎನ್ನುವುದು ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (ಎನ್‌ಸಿಆರ್‌ಬಿ) ನೀಡಿರುವ ಮಾಹಿತಿ. 2011–14ರ ಅವಧಿಯಲ್ಲಿ ಭಾರತದಲ್ಲಿ 3.25 ಲಕ್ಷ ಮಕ್ಕಳು ಕಣ್ಮರೆಯಾಗಿದ್ದಾರೆ– ಇದು ಸಂಸತ್ತಿನಲ್ಲಿ ಕಳೆದ ವಾರ ಕೇಂದ್ರ ಸಚಿವರು ನೀಡಿದ ಅಂಕಿ ಅಂಶ. ಹೀಗೆ ಕಣ್ಮರೆಯಾಗುವ ಮಕ್ಕಳ ಪೈಕಿ ಶೇಕಡಾ 55ರಷ್ಟು ಹೆಣ್ಣು ಮಕ್ಕಳು. ಈ ಮಕ್ಕಳು ಎಲ್ಲಿಗೆ ಹೋಗುತ್ತಾರೆ? ಸ್ವ–ಇಚ್ಛೆಯಿಂದಲೇ ಮನೆ ಬಿಟ್ಟು ಹೋಗುತ್ತಿದ್ದಾರಾ? ಅಥವಾ ಬೇರೆಯವರ ಪ್ರಲೋಭನೆಗೆ ಬಿದ್ದು ವಂಚನೆಗೆ ಒಳಗಾಗುತ್ತಾರಾ? ಹೀಗೆ ಮನೆ ಬಿಟ್ಟ ಮಕ್ಕಳು ಮತ್ತೆ ಮನೆಗೆ ವಾಪಸಾಗಲು ತಕ್ಕ ಪರಿಸ್ಥಿತಿ ಇಲ್ಲವೆ? ಅವರನ್ನು ಹುಡುಕಿ ಹೆತ್ತವರಿಗೆ ಮರಳಿ ಒಪ್ಪಿಸಲು ಪೊಲೀಸ್ ವ್ಯವಸ್ಥೆಗೆ ಏಕೆ ಸಾಧ್ಯವಾಗುತ್ತಿಲ್ಲ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದರೆ, ನಮ್ಮಲ್ಲಿ ಎಳೆಯ ಮಕ್ಕಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳೆಲ್ಲವೂ ಅನಾವರಣಗೊಳ್ಳುತ್ತವೆ. 2013ರಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಈ ಕುರಿತ ಪ್ರಕರಣವೊಂದು ವಿಚಾರಣೆಗೆ ಬಂದಿತ್ತು. 'ದೇಶದಲ್ಲಿ ಪ್ರತಿ ವರ್ಷ 1.7 ಲಕ್ಷ ಮಕ್ಕಳು ಕಣ್ಮರೆಯಾಗುತ್ತಿದ್ದಾರೆ' ಎಂದು ಆಗ ಸರ್ಕಾರವು ಕೋರ್ಟ್‌ಗೆ ತಿಳಿಸಿತ್ತು. ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂಕೋರ್ಟ್ ಪೀಠವು, ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸ್ ವ್ಯವಸ್ಥೆಯನ್ನು ಬಲಗೊಳಿಸಬೇಕು ಎಂದೆಲ್ಲ ಸೂಚಿಸಿತ್ತು. ಅದಾಗಿ ಎರಡು ವರ್ಷಗಳ ಬಳಿಕ ಈಗ ಎನ್‌ಸಿಆರ್‌ಬಿ ಯ ದಾಖಲೆಗಳನ್ನು ಗಮನಿಸಿದರೆ, ಕಣ್ಮರೆಯಾಗುತ್ತಿರುವ ಮಕ್ಕಳ ಸಂಖ್ಯೆ ಇನ್ನೂ ಒಂದೂವರೆ ಲಕ್ಷದಷ್ಟು ಹೆಚ್ಚಿದೆ. ಹೀಗೆ ಕಣ್ಮರೆಯಾದ ಮಕ್ಕಳ ಪೈಕಿ ಶೇಕಡಾ 45ರಷ್ಟು ಮಕ್ಕಳು ಮರಳಿ ಬರುವುದೇ ಇಲ್ಲ ಎನ್ನುವುದು ಇನ್ನೂ ಘೋರ ಸಂಗತಿ.

ಮಕ್ಕಳು ಮನೆಬಿಟ್ಟು ಹೋಗಲು ಅಥವಾ ಕಣ್ಮರೆಯಾಗಲು ನೂರೆಂಟು ಕಾರಣಗಳಿವೆ. ಕಿತ್ತು ತಿನ್ನುವ ಬಡತನ, ಧಾರ್ಮಿಕ ಮೌಢ್ಯ, ನಿರುದ್ಯೋಗ, ಸಾಮಾಜಿಕ ತಾರತಮ್ಯ, ಹೆತ್ತವರ ದುರಾಸೆ, ವೇಶ್ಯಾವಾಟಿಕೆಯ ಜಾಲ, ಭಿಕ್ಷಾಟನೆಯ ಜಾಲ– ಹೀಗೆ ಈ ಕಾರಣಗಳನ್ನು ಪಟ್ಟಿ ಮಾಡಬಹುದು. ದೇಶದಾದ್ಯಂತ 3 ಲಕ್ಷ ಬಾಲಭಿಕ್ಷುಕರಿದ್ದಾರೆ ಎನ್ನುವ ಅಂಕಿ ಅಂಶವನ್ನೂ ಎನ್‌ಸಿಆರ್‌ಬಿ ಇತ್ತೀಚೆಗೆ ಪ್ರಕಟಿಸಿತ್ತು. ಮಕ್ಕಳನ್ನು ಅಪಹರಿಸಿ ಅಥವಾ ಸಿಟ್ಟಿನಿಂದ, ಅಸಹಾಯಕತೆಯಿಂದ ಮನೆ ಬಿಟ್ಟು ಹೋದ ಮಕ್ಕಳ ಅಂಗಾಂಗಳನ್ನು ತಿರುಚಿ ಭಿಕ್ಷೆಗೆ ಹಚ್ಚುವ ವ್ಯವಸ್ಥಿತ ಜಾಲವೇ ಮಹಾನಗರಗಳಲ್ಲಿ ಸಕ್ರಿಯವಾಗಿದೆ. ಭಾರತದಿಂದ ನೇಪಾಳದ ಮೂಲಕ ಅರಬಸ್ತಾನದ ಒಂಟೆರೇಸ್‌ಗೆ ಕೂಡಾ ಮಕ್ಕಳ ಕಳ್ಳಸಾಗಣೆ ಮಾಡುವ ಜಾಲವೊಂದಿದೆ ಎನ್ನುವುದು ಇತ್ತೀಚೆಗೆ ಬಯಲಾಗಿತ್ತು. ವೇಶ್ಯಾವಾಟಿಕೆಯ ಜಾಲ ಎಷ್ಟು ಕ್ರೂರವಾಗಿದೆಯೆಂದರೆ, ಒಮ್ಮೆ ಈ ಜಾಲಕ್ಕೆ ಸಿಕ್ಕ ಬಾಲೆಯರು ಮತ್ತೆ ಮರಳಿ ಬರುವುದು ಸಾಧ್ಯವೇ ಇಲ್ಲ ಎನ್ನುವಂತಿದೆ. ಮರಳಿ ಬಂದರೂ ಅವರ ಪುನರ್ವಸತಿಗೆ ಸೂಕ್ತ ವ್ಯವಸ್ಥೆ ಮತ್ತು ಮನಸ್ಸು ಇಲ್ಲದ ಸಮಾಜದಲ್ಲಿ ಬದುಕಲಾಗದೆ ಮತ್ತೆ ಅದೇ ಜಾಲಕ್ಕೆ ಮರಳುವುದೂ ನಡೆದಿದೆ.

ಕಳೆದ ಮೂರೂವರೆ ವರ್ಷಗಳಲ್ಲಿ ಅತ್ಯಂತ ಹೆಚ್ಚು ಮಕ್ಕಳ ಕಣ್ಮರೆ ಪ್ರಕರಣ (50 ಸಾವಿರ) ದಾಖಲಾಗಿರುವುದು ಮಹಾರಾಷ್ಟ್ರದಲ್ಲಿ. ನಂತರದ ಸ್ಥಾನ ಮಧ್ಯಪ್ರದೇಶ, ದೆಹಲಿ ಮತ್ತು ಆಂಧ್ರಪ್ರದೇಶ. ಹಾಗೆಂದು ಕರ್ನಾಟಕದಲ್ಲೂ ಇಂತಹ ಪ್ರಕರಣಗಳು ಕಡಿಮೆಯೇನಲ್ಲ. ಕರ್ನಾಟಕದಲ್ಲಿ ಪ್ರತಿದಿನ ಸರಾಸರಿ 27 ಮಕ್ಕಳು ಮತ್ತು ಮಹಿಳೆಯರು ಕಣ್ಮರೆಯಾಗುತ್ತಿದ್ದಾರೆ ಎನ್ನುತ್ತಿದೆ ವರದಿ. ಅದರಲ್ಲೂ ಬೆಂಗಳೂರಿನಲ್ಲಿ ಅತ್ಯಧಿಕ. ಈ ವರ್ಷದ ಜನವರಿ 14ರಿಂದ ಮೇ 15ರೊಳಗೆ 14361 ಮಕ್ಕಳು ಮತ್ತು ಮಹಿಳೆಯರು ಕಣ್ಮರೆಯಾಗಿದ್ದಾರೆ. ಇವರಲ್ಲಿ 11283 ಮಂದಿ ಮರಳಿ ಸಿಕ್ಕಿದ್ದಾರೆ. 72 ಶವಗಳು ಪತ್ತೆಯಾಗಿವೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಮಾಜವೂ ಈ ಸುದ್ದಿಗೆ ಸಂವೇದನಾಶೂನ್ಯವಾಗಿ ವರ್ತಿಸುತ್ತಿರುವುದು ಕಳವಳ ಹುಟ್ಟಿಸುವ ಅಂಶ. ಪೊಲೀಸ್ ಠಾಣೆಗೆ ಫೋನ್ ಮಾಡಿ, ಮಗ ಅಥವಾ ಮಗಳು ಕಾಣೆಯಾಗಿದ್ದಾರೆ ಎಂದರೆ, 'ಒಂದು ವಾರ ನೀವೇ ಹುಡುಕಿ, ಎಲ್ಲೂ ಸಿಗದಿದ್ದರೆ ಆಮೇಲೆ ದೂರು ದಾಖಲಿಸಿ' ಎನ್ನುವ ಉತ್ತರ ಇತ್ತೀಚೆಗೆ ಮಾಮೂಲಾಗಿದೆ. ಪೊಲೀಸರನ್ನೂ ದೂರುವಂತಿಲ್ಲ. ಇವತ್ತು ಎಳೆಯ ಮಕ್ಕಳು ಸಾಮಾಜಿಕ ಜಾಲತಾಣದಲ್ಲಿ ಎಂತಹ ವಿಕೃತ ವಿಷಯಗಳತ್ತ ಆಕರ್ಷಿತರಾಗುತ್ತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಸರ್ಕಾರ ಮತ್ತು ಸಮಾಜ ಎರಡೂ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಶಾಲಾ– ಕಾಲೇಜುಗಳ ಹಂತದಲ್ಲಿ ಎಳೆಯರಿಗೆ ಈ ನಿಟ್ಟಿನಲ್ಲಿ ಸೂಕ್ತ ಜಾಗೃತಿ ಮೂಡಿಸಬೇಕಾದ ಅಗತ್ಯವೂ ಇದೆ.

■ ಬಿ.ಎಂ.ಹನೀಫ್

ಮಕ್ಕಳು ಮನೆಬಿಟ್ಟು ಹೋಗಲು ಅಥವಾ ಕಣ್ಮರೆಯಾಗಲು ನೂರೆಂಟು ಕಾರಣಗಳಿವೆ. ಕಿತ್ತು ತಿನ್ನುವ ಬಡತನ, ಧಾರ್ಮಿಕ ಮೌಢ್ಯ, ನಿರುದ್ಯೋಗ, ಸಾಮಾಜಿಕ ತಾರತಮ್ಯ, ಹೆತ್ತವರ ದುರಾಸೆ, ವೇಶ್ಯಾವಾಟಿಕೆಯ ಜಾಲ, ಭಿಕ್ಷಾಟನೆಯ ಜಾಲ




ಈಶ್ವರ್